## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.

## ಸಿ.ಸಿ.ನಂ. 798/2019

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ನಯಾಜ್ ಬೇಗ್** | | |
| **ಗಂಡ:ತಂದೆ:ಹೆಸರು** | **ಇಬ್ರಾಹಿಂ ಬೇಗ್** | **ಪಿಡಬ್ಲೂ:** | **1** |
| **ವಯಸ್ಸು:** | **43 ವರ್ಷ** | **ಸಿಡಬ್ಲೂ:** | **1** |
| **ಉದ್ಯೋಗ:** | **ಪೋಲಿಸಿ ಇನ್ಸ್‌ಪೆಕ್ಟರ್,<br>ಎ.ಸಿ.ಬಿ. ಬೆಂಗಳೂರು** | | |
| **ವಾಸ ಸ್ಥಳ:** | **ಬೆಂಗಳೂರು** | | |

**ದಿನಾಂಕ 28-07-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::-**

ನಾನು ದಿನಾಂಕ: 22-02-2019 ರಿಂದ 05.06.2019 ರವರೆಗೆ ಚಿಂತಾಮಣಿ ಗ್ರಾಮಾಂತರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:15.05.2019 ರಂದು ನನಗೆ ಬಂದ ಬಾತ್ಮಿ ಏನೆಂದರೆ ಗುಡಿಸಲಹಳ್ಳಿ ಗ್ರಾಮದ ವಾಸಿ ವೆಂಕಟರಮಣಪ್ಪನವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ನಾನು ಮತ್ತು ಸಿಬ್ಬಂದಿ ಯಾದ ವೀರಭದ್ರಸ್ವಾಮಿ ಮತ್ತು ಚಾಲಕ ವೇಣು ರವರೊಂದಿಗೆ ಗುಡಿಸಲಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ, ಕೆಂಚಾರ್ಲಹಳ್ಳಿ ಠಾಣೆಯ ಉಪನಿರೀಕ್ಷಕರಾದ ವಿಕಾಸ್ ಮತುತ ಸಿಬ್ಬಂದಿಯಾದ ಶ್ರೀನಿವಾಸ್ ರವರನ್ನು ಬರಮಾಡಿಕೊಂಡು

ಮತ್ತು ಪಂಚಾಯಿತಿದಾರರನ್ನು ಈ ಕೇಸಿನ ಬಗ್ಗೆ ತಿಳಿಸಿ, ಅವರ ಒಪ್ಪಿಗೆ ಪಡೆದು, ಈ ಪ್ರಕರಣದ ಆರೋಪಿಯಾದ ವೆಂಕಟರವಣಪ್ಪರವರ ಚಿಲ್ಲರೆ ಅಂಗಡಿಗೆ ಭೇಟಿ ನೀಡಿ, ದಾಳಿ ಮಾಡಿ ಒಂದು ಗೋಣಿ ಚೀಲದಲ್ಲಿದ್ದ ಮಧ್ಯದ ಬಾಟಲ್ ಗಳನ್ನು ಪಂಚರ ಸಮಕ್ಷಮ ಅಮಾನತು ಮಾಡಿ, ಅದರಲ್ಲಿರುವ ಮಧ್ಯದ 2 ಬ್ಯಾಗ್ ಪೇಪರ್ ವಿಸ್ಕಿ ಬಾಟಲ್, ಓಲ್ಡ್ ಟವೆರಾ ವಿಸ್ಕಿ ಮತ್ತು ನಾಕೋಟ್ ಸ್ಟ್ರಾಂಗ್ ಬಿಯರ್ ಬಾಟಲ್ ಗಳು ಮತ್ತು ಕಿಂಗ್ ಪಿಷರ್ ಸ್ಟ್ರಾಂಗ್ ನ 2 ಬಾಟಲ್ ಗಳನ್ನು ವಶಕ್ಕೆ ಪಡೆದುಕೊಂಡು, ಈ ಕೇಸಿನ ಆರೋಪಿ ವೆಂಕಟರವಣಪ್ಪನನ್ನು ಪರವಾನಗಿ ಬಗ್ಗೆ ವಿಚಾರಿಸಲಾಗಿ ಆರೋಪಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಪ್ರತಿಯೊಂದರಲ್ಲಿ ಒಂದು ಬಾಟಲ್ ನ್ನು ಎಫ್.ಎಸ್.ಎಲ್.ಗೆ ಕಳುಹಿಸಿರುತ್ತೇನೆ. ಆರೋಪಿ ಮತ್ತು ಮಾಲನ್ನು ವಶಪಡಿಸಿಕೊಂಡಿರುತ್ತೇನೆ.

ನಾನು ಪಂಚರ ಸಮಕ್ಷಮ ಮಾಲು ಅಮಾನತು ಪಂಚನಾಮೆಯನ್ನು ಆ ದಿನ ಸಂಜೆ 6.30 ರಿಂದ 7.15 ಗಂಟೆವರೆಗೆ ಮಾಡಿರುತ್ತೇನೆ. ಸದರಿ ಮಾಲು ಅಮಾನತು ಪಂಚನಾಮೆಯನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ.2, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ.ಎಸ್.ವಿ.ಆರ್. ಆರೋಪಿ ಪರ ವಕೀಲರಿಂದ:-**

**ಸಿಡಬ್ಲೂ:1**

ನಾನು ಗುಡಿಸಲಹಳ್ಳಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಂಗಡಿ ಹಾಕಿದ್ದರೆ ಲೈಸನ್ಸ್ ನ್ನು ಪಡೆಯುತ್ತಿದ್ದರು, ಆದ್ದರಿಂದ ಅವರು ಅಂಗಡಿಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಾಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ಶ್ರೀಮತಿ. ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.